ಸಿ.ಸಿ. ನಂ.190/2022

ಪಿ.ಡಬ್ಲ್ಯೂ-1

ದಿನಾಂಕ 30-06-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಕರಿಸಲಾಯಿತು.

**ಪಾಟೀ ಸವಾಲುಃ** ಆರೋಪಿ ಪರ ಶ್ರೀ ಎ.ಎನ್.ಟಿ. ವಕೀಲರಿಂದ

1. ಅಂಕೋಲಾ ಅರ್ಬನ್ ಕೋಆಪರೆಟಿವ್ ಬ್ಯಾಂಕ್ ಕರ್ನಾಟಕ ಸರ್ಕಾರ ಮಾಡಿದ ಕೋಆಪರೆಟಿವ್ ಕಾಯ್ದೆಯಲ್ಲಿ ಅನ್ವಯವಾಗುತ್ತದೆ. ಕೋಆಪರೆಟಿವ್ ಕಾಯ್ದೆ ನಿಯಮಗಳು ನನಗೆ ಗೊತ್ತು. ಕಾಯ್ದೆ ಕಾನೂನುಗಳನ್ನು ಜಾರಿ ಮಾಡುವಂತವರು ಎ.ಆರ್. ಮತ್ತು ಡಿ.ಆರ್. ಎಂದರೆ ಸರಿ. ಸದ್ರಿ ಅಂಕೋಲಾ ಅರ್ಬನ್ ಕೋಆಪರೆಟಿವ್ ಬ್ಯಾಂಕ್ ಕರ್ನಾಟಕ ಸರ್ಕಾರ ಕೋಆಪರೆಟಿವ್ ಕಾಯ್ದೆಯಡಿಯಲ್ಲಿ ಬರುತ್ತದೆ. ಸದ್ರಿ ಅಂಕೋಲಾ ಅರ್ಬನ್ ಕೋಆಪರೆಟಿವ್ ಬ್ಯಾಂಕ್ ನ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ನಾನೇ ಆಗಿರುತ್ತೇನೆ. ನೀವು ಸದ್ರಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಎಂದು ಬ್ಯಾಂಕಿನ ಪರವಾಗಿ ಪ್ರತಿನಿಧಿಸುತ್ತಿಲ್ಲ ಎಂದರೆ ಆತರಹ ಹುದ್ದೆ ನಮ್ಮ ಬ್ಯಾಂಕಿನಲ್ಲಿ ಇಲ್ಲ ನಾನು ಜನರಲ್ ಮ್ಯಾನೇಜರ್ ಆಗಿರುತ್ತೇನೆ. ಕೋಆಪರೆಟಿವ್ ಸೊಸೈಟಿಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗೆ ಬ್ಯಾಂಕನ್ನು ಪ್ರತಿನಿಧಿಸುವ ಅಧಿಕಾರವಿರುತ್ತದೆ ಎಂದರೆ ಸರಿ. ಬ್ಯಾಂಕಿನ ಇತರ ಅಧಿಕಾರಿಗಳಿಗೆ ಸದ್ರಿ ಕೋಆಪರೆಟಿವ್ ಸೊಸೈಟಿಯನ್ನು ಪ್ರತಿನಿಧಿಸುವ ಅಧಿಕಾರವಿರುವುದಿಲ್ಲ ಎಂದರೆ ಸರಿ. ಅಂಕೋಲಾ ಅರ್ಬನ್ ಕೋಆಪರೆಟಿವ್ ಬ್ಯಾಂಕ್ ಗೆ ಪ್ರೊಫೆಷನಲ್ ನಿರ್ದೇಶಕರು ಸೇರಿ ಒಟ್ಟು 15 ಜನ ನಿರ್ದೆಶೇಕರು ಇರುತ್ತಾರೆ. ಸದ್ರಿ ಬ್ಯಾಂಕಿಗೆ ಅಧ್ಯಕ್ಷರು, ಕಾರ್ಯದರ್ಶಿಗಳು ಇರುತ್ತಾರಾ ಎಂದರೆ ಆ ಬ್ಯಾಂಕಿನಲ್ಲಿ ಅಧ್ಯಕ್ಷ ಮತ್ತು ಉಪಧ್ಯಕ್ಷ ಎಂಬ ಎರಡು ಹುದ್ದೆಗಳಿರುತ್ತವೆ. ಬ್ಯಾಂಕಿನ ಯಾವುದೇ ಸಿಬ್ಬಂದಿಯನ್ನು ನ್ಯಾಯಾಲಯದ ಪ್ರಕರಣದಲ್ಲಿ ಬ್ಯಾಂಕಿನ ಪರವಾಗಿ ಪ್ರತಿನಿಧಿಸಬೇಕಾದರೆ ಬೋರ್ಡ್ ಆಫ್ ಡೈರೆಕ್ಟರ್ ಗಳು ಠರಾವನ್ನು ಪಾಸ್ ಮಾಡಬೇಕಾಗುತ್ತದೆ ಎಂದರೆ ಸರಿ. ಸಾಕ್ಷಿಯು ಪುನಹ ಮುಂದುವರಿದು ಬ್ಯಾಂಕಿನಲ್ಲಿ ಬೈ ಲಾ ಇರುತ್ತದೆ. ಅದರ ಪ್ರಕಾರ ಪ್ರಧಾನ ವ್ಯವಸ್ಥಾಪಕರಿಗೆ

ಏನೆಲ್ಲ ಅಧಿಕಾರ ನೀಡಲಾಗಿರುತ್ತದೆ ಎಂದು ಅದರಲ್ಲಿ ಬರೆಯಲಾಗಿರುತ್ತದೆ. ನಿಮ್ಮ ಪಿರ್ಯಾದಿ ಅಥವಾ ನೋಟಿಸಿನಲ್ಲಾಗಲಿ ಅಥವಾ ಬ್ಯಾಂಕಿನ ಬೈಲಾದಲ್ಲಿ ಬ್ಯಾಂಕಿನ ಜನರಲ್ ಮ್ಯಾನೇಜರ್ ರವರಿಗೆ ನ್ಯಾಯಾಲಯದ ಪ್ರಕರಣಗಳಲ್ಲಿ ಬ್ಯಾಂಕಿನಿಂದ ಪ್ರತಿನಿಧಿಸಬಹುದು ಎಂದು ಬರವಣಿಗೆ ಮಾಡಿದ್ದು ಇರುತ್ತದೆಯಾ ಎಂದರೆ ಸಾಕ್ಷಿಯು ದಾಖಲಾತಿಗಳನ್ನು ನೋಡಿ ಇಲ್ಲ ಎಂದು ನುಡಿಯುತ್ತಾರೆ. ಬ್ಯಾಂಕಿನ ಪರವಾಗಿ ಪ್ರತಿನಿಧಿಸಲು ನಿಮಗೆ ಯಾವ ರೀತಿಯ ಅಧಿಕಾರವನ್ನು ಕೊಡಲಾಗಿರುತ್ತದೆ ಎಂದು ನಿಮ್ಮ ಪಿರ್ಯಾದಿಯಲ್ಲಾಗಲಿ ಅಥವಾ ನೋಟಿಸಿನಲ್ಲಿ ಹೇಳಿಕೊಂಡಿದ್ದು ಇಲ್ಲ ಎಂದರೆ ಸರಿ.

2. ಈ ಪ್ರಕರಣದಲ್ಲಿ ಬೋರ್ಡ್ ಆಫ್ ಡೈರೆಕ್ಟರ್ ಗಳು ಠರಾವನ್ನು ಮಾಡಿ ನಿಮಗೆ ಕೊಟ್ಟ ಅಧಿಕಾರ ಪತ್ರವನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿದ್ದು ಇಲ್ಲ ಎಂದರೆ ಸರಿ. ಬ್ಯಾಂಕನ್ನು ಪ್ರತಿನಿಧಿಸಲು ನಿಮಗೆ ಈ ಪ್ರಕರಣದಲ್ಲಿ ಹಾಜರಾಗಲು ಅಧಿಕಾರವಿದೆ ಎಂದು ತೋರಿಸಲು ಅಧಿಕಾರ ಪತ್ರವನ್ನು ಯಾವುದೇ ದಾಖಲೆಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ ಎಂದರೆ ಸರಿ.

3. ಈ ಪ್ರಕರಣದಲ್ಲಿ ಆರೋಪಿಯು ಕೊಟ್ಟಿದ್ದಾನೆ ಎಂದು ಹೇಳುವ ಚೆಕ್ಕು, ಕರ್ನಾಟಕ ಬ್ಯಾಂಕಿನ ಹಿಂಬರಹ ಹಾಗೂ ಆರೋಪಿಗೆ ನೀಡಿದ ಲೀಗಲ್ ನೋಟಿಸ್ ಮತ್ತು ಅಂಚೆ ಸ್ವೀಕೃತ್ತಿಯನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲಾತಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ ಎಂದರೆ ಸರಿ.

**ಈ ಹಂತದಲ್ಲಿ ಮುಂದುವರಿದ ಪಾಟಿ ಸವಾಲಿಗೆ ಆರೋಪಿ ಪರ ವಕೀಲರು ಸಮಯವಕಾಶ ಕೋರಿದ್ದು, ಸಮಯವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅಂಕೋಲಾ.